

**ಎಡದಿಂದ ಬಲಕ್ಕೆ:**

1. ಅದೆಲ್ಲ ಲೆಕ್ಕಕ್ಕಿಲ್ಲ, ಆದರೆ ಪ್ರಾಪಂಚಿಕವಲ್ಲ ಬಿಡಿ (4)
3. ವಿಷಯವನ್ನು ಕೇಳಿದೊಡನೆ ಎಚ್ಚರ ತಪ್ಪಿದನೇ? (3)
4. ವಾರಿಜದಿಂದ ಪೂಜಿಸುವ ಸಂಪ್ರದಾಯ ಇಲ್ಲಿ (3)
6. ವಿಧೇಯನಾದದ್ದು ಹೊಸ ಹುಟ್ಟು ಹೌದು (4)
7. ಕಮ್ಮಿಯೇನಿಲ್ಲ, ಬರೀ ಆಸೆ (3)
9. ಆತಂಕ ಬೇಡ, ಇದೇ ಅವರ ಒಪ್ಪಿಗೆಯ ಸಹಿ (3)
11. ಮುಖ ನೋಡಿದರೇ ತಿಳಿದೀತು, ಆತ ತುಂಬ ನುರಿತವ (3)
13. ಕಾರ್ಯರೂಪಕ್ಕೆ ತರಲೇಬೇಕೆಂಬ ಒಪ್ಪಂದ (3)
15. ಹಕ್ಕನ್ನೆಲ್ಲ ಕಿತ್ತುಕೊಳ್ಳುವ ಸಂಚು (4)
17. ಆವರಣದ ತುಂಬ ಏನು ಈ ಕೂಗು (3)
18. ವರಸೆ ತೋರಲು ಪ್ರಾಣಿ ಬೆನ್ನಿನ ಪಯಣ ಹಿಂದು ಮುಂದು (3)
19. ಕೂಗಳತೆಯಲ್ಲಿ ಎಲ್ಲರಿಂದ ನಿಂದನೆ (4)

**ಮೇಲಿಂದ ಕೆಳಕ್ಕೆ:**

1. ಆಸೆ ಏನೇ ಇರಲಿ, ಊಟ ಬೇಕೇ ಬೇಕು (3)
2. ಆ ಕಾರಿನದು ಕಪ್ಪು ಬಣ್ಣ (3)
3. ಮರವೇರುವಾಗ ಸ್ವಲ್ಪ ಬಿಡುವು (3)
5. ಜಮಖಾನದ ಕೆಳಗೆ ಇದೇನು ಕರ್ಣಾಭರಣ? (3)
7. ಕರೆತರಲಿಕ್ಕೆ ತಕ್ಕದ್ದೇ ಈ ಮಾಸ? (3)
8. ಮದವೇರಿದ ಆನೆ-ತಲೆ ಕೆಳಗಾಯಿತೇ? (3)
9. ಆತುರಕ್ಕೆ ಇಳಿದವನಿಗೆ ಯಮನೇ ಕಂಡಾನು (3)
10. ತಾವರೆ ತರುವವರ ತಾಯಿಯೂರು (3)
12. ದೀನ ಜನರಿಗೆಲ್ಲ ಒಂದೊಂದು ಚಿನ್ನದ ನಾಣ್ಯ (3)
14. ಸಾಕ್ಷರರಲ್ಲದ ಕ್ರೂರಿ, ದೈತ್ಯ (3)
15. ಹತ್ತೆಣಿಸುವುದರೊಳಗೇ ಸಿಕ್ಕಿತ್ತೊಂದು ದೀಪ (3)
16. ಕಾತುರದ ಜೊತೆ ಜೊತೆಗೆ ಬರೀ ನವೆ (3)

## ಪದಬಂಧ: 14-04-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಂಧಕಾರ; 3. ಸತತ; 7. ಅನುಮತಿ; 8. ಪ್ರಭಾವ; 9. ಮೆದು; 12. ಯತಿ; 14. ರಾಯಸ; 15. ಮಿತ್ರಬಣ; 17. ತಾವರೆ; 18. ಹಗರಣ.

ಮೇಲಿಂದ ಕೆಳಕ್ಕೆ:

1. ಅಂತ; 2. ಕಾನೂನು; 4. ತರಾವರಿ; 5. ಪ್ರತಿಮೆ; 6. ಸಂಪ್ರದಾಯ; 10. ದುರ್ವ್ಯಸನ; 11. ಪರಾಭವ; 13. ತಿಮಿರು; 16. 'ಬರೀಗ' (ಗರೀಬ ತಲೆಕೆಳಗು); 17. ತಾಣ.

# ಪರ್ವತ ಅದ್ಭುತ



**'ಪರ್ವತ ಪಂಕ್ತಿ' – ಎಲ್ಲೆಲ್ಲಿ?**

'ಪರ್ವತ'–ಭೂ ಮೇಲ್ಮೈನಲ್ಲಿ ಎದ್ದು ಕಾಣುವ ಲಕ್ಷಣ ಅದು. ಎಲ್ಲ ಭೂ ಖಂಡಗಳಲ್ಲೂ ಪರ್ವತಗಳಿವೆ. ಒಂಟೊಂಟಿಯಾಗಿ ಅಥವಾ ಸಾವಿರಾರು ಕಿ.ಮೀ. ಉದ್ದದ ಸುದೀರ್ಘ ಪಂಕ್ತಿಗಳಾಗಿ ಅವು ನಿಂತಿವೆ. ಹಿಮಾಚ್ಛಾದಿತ ಬಹು ಶಿಖರಗಳನ್ನು ಧರಿಸಿ, ನದಿಗಳಿಗೆ ಸೆಲೆ ಒದಗಿಸಿ, ವಿಶಿಷ್ಟ ಜೀವ ಜಾಲಗಳಿಗೂ ಆಶ್ರಯವಾಗಿರುವ ಪರ್ವತ ಸಾಲುಗಳು ಹತ್ತಾರು, ಹಲವಾರು (ಭೂಪಟದಲ್ಲಿ ಕೆಂಪು ಬಣ್ಣದ ಪ್ರದೇಶಗಳು). ದೀರ್ಘತ್ವದಲ್ಲಿ ಗಾತ್ರ–ವಿಸ್ತಾರಗಳಲ್ಲಿ ಅಗ್ರ ಸ್ಥಾನದಲ್ಲಿರುವ ಪರ್ವತ ಪಂಕ್ತಿಗಳು.

1. ಆ್ಯಂಡಿಸ್: ದಕ್ಷಿಣ ಅಮೆರಿಕ ಖಂಡದ ಪಶ್ಚಿಮ ಕರಾವಳಿಯುದ್ದಕ್ಕೂ ಹಬ್ಬಿರುವ ಆ್ಯಂಡಿಸ್ ಪರ್ವತಸಾಲಿನದು ಉದ್ದದಲ್ಲಿ ಪ್ರಥಮ ಸ್ಥಾನ. ಇದರ ಒಟ್ಟು ಉದ್ದ 7200 ಕಿ.ಮೀ. 183 ಜೀವಂತ ಜ್ವಾಲಾಮುಖಿಗಳನ್ನೂ ಧರಿಸಿರುವ ಈ ಪರ್ವತವೇ ಧರೆಯ ಅದ್ವಿತೀಯ ಅತ್ಯದ್ಭುತ ನದಿಯಾದ ಅಮೆಜಾನ್‌ನ ಜನ್ಮ ನೆಲೆ ಕೂಡ. ಇಲ್ಲಿನ ಅತ್ಯುನ್ನತ ಶಿಖರ 'ಅಕೊಂಕಾಗುವಾ'ದ ಎತ್ತರ 6959 ಮೀ.

2. ರಾಖೀಸ್: ಉತ್ತರ ಅಮೆರಿಕ ಖಂಡದ ಪಶ್ಚಿಮದುದ್ದಕ್ಕೂ ನಿಂತಿರುವ ರಾಖೀಸ್ ಪರ್ವತ ಪಂಕ್ತಿ ಆರು ಸಾವಿರ ಕಿ.ಮೀ. ಉದ್ದ ಇದೆ. ಮೂರು ಸಾವಿರ ಮೀಟರ್‌ಗಿಂತ ಅಧಿಕ ಎತ್ತರದ ಒಂದು ನೂರು ಶಿಖರಗಳು ಈ ಪರ್ವತ ಸ್ತೋಮದಲ್ಲಿವೆ. ಅತ್ಯುನ್ನತ ಶಿಖರ 'ಮೌಂಟ್ ಮೆಕಿನ್ಲೆ'ಯ ಔನ್ನತ್ಯ 6194 ಮೀಟರ್.

3. ಹಿಮಾಲಯ: ಉದ್ದದಲ್ಲಿ ತೃತೀಯ ಸ್ಥಾನದಲ್ಲಿದ್ದರೂ (ಉದ್ದ 3800 ಕಿ.ಮೀ.) ಅತ್ಯುನ್ನತ ಶಿಖರಗಳಿಗೆ ಹೆಸರಾಂತ ಪರ್ವತ ಪಂಕ್ತಿ. ಪೃಥ್ವಿಯ ಇಡೀ ಪರ್ವತ ಸಾಮ್ರಾಜ್ಯದಲ್ಲಿ 7300 ಮೀ. ಎತ್ತರ ಮೀರಿದ ಒಟ್ಟು 109 ಶಿಖರಗಳ ಪೈಕಿ 96 ಶಿಖರಗಳು ಹಿಮಾಲಯದಲ್ಲೇ ಇವೆ. ಅನ್ನಪೂರ್ಣ, ಮಕಾಲು, ಲ್ಹೋಟ್ಸೇ, ಕಾಂಚನಜುಂಗಾ, ಕೆ–2 ಈ ಶಿಖರಗಳು ಎಂಟು ಸಾವಿರ ಮೀಟರ್‌ಅನ್ನೂ ಮೀರಿವೆ. ಧರೆಯ ಅತ್ಯುನ್ನತ ಶಿಖರ 'ಗೌರೀಶಂಕರ' (ಮೌಂಟ್ ಎವರೆಸ್ಟ್)ದ ಎತ್ತರ 8848 ಮೀ. (29028 ಅಡಿ).

4. ದಿ ಗ್ರೇಟ್ ಡಿವೈಡಿಂಗ್ ರೇಂಜ್: ಆಸ್ಟ್ರೇಲಿಯಾ ಖಂಡದ ಪೂರ್ವದುದ್ದಕ್ಕೂ ಹಬ್ಬಿರುವ ಪರ್ವತ ಸಾಲು. ಉದ್ದ 3600 ಕಿ.ಮೀ.

5. ಟ್ರಾನ್ಸ್ ಅಂಟಾರ್ಕ್ಟಿಕ್ ಪರ್ವತ ಪಂಕ್ತಿ: ಅಂಟಾರ್ಕ್ಟಿಕಾ ಭೂ ಖಂಡದ ಈ ಪರ್ವತ ಸಾಲು 3500 ಕಿ.ಮೀ. ಉದ್ದ ಇದೆ. ಅತ್ಯುನ್ನತ ಶಿಖರ 'ವಿನ್ಸನ್ ಮ್ಯಾಸಿಫ್'ನ ಎತ್ತರ 4897 ಮೀಟರ್.

ಧರೆಯ ಉಳಿದೆಲ್ಲ ಪರ್ವತ ಪಂಕ್ತಿಗಳದು 3000 ಕಿ.ಮೀ. ಗಿಂತ ಕಡಿಮೆ ಉದ್ದ.

■ ಎನ್.ವಾಸುದೇವ್